**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ. ನ್ಯಾಯಾಲಯ ಕುಣಿಗಲ್**

# ಸಿ.ಸಿ.1075/2018

ಸಾಕ್ಷಿದಾರರ ಹೆಸರು : ಪ್ರಕಾಶ

ತಂದೆಯ ಹೆಸರು : ಗೋಪಾಲ

ವಯಸ್ಸು : 47 ವರ್ಷ

ಉದ್ಯೋಗ : ನಿರ್ವಾಹಕ

ವಾಸ : ಕುಣಿಗಲ್ ಟೌನ್.

**ಸಾಕ್ಷಿಯನ್ನು ದಿನಾಂಕ:04.03.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಈ ಪ್ರಕರಣದ ಬಗ್ಗೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ **ನಿಪಿ.6** ಎಂದು, ಅದರಲ್ಲಿನ ಸಹಿಯನ್ನು **ನಿ.ಪಿ.6(ಬಿ)** ಎಂದು ಗುರುತಿಸಲಾಯಿತು. ಸುಮಾರು 2018 ರಲ್ಲಿ ನಾನು ಕುಣಿಗಲ್ ನ ಬಸ್ ನಿಲ್ದಾಣದಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿ ಬರೆದಿರುವ ಮಾಹಿತಿಗಳು ನನಗೆ ಗೊತ್ತಿಲ್ಲ. ಪಂಚನಾಮೆ ಮಾಡಿ ಪೋಲಿಸರು ಏನು ಮಾಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ.

**( ಈ ಹಂತರದಲ್ಲಿ ಮಾನ್ಯ ಸ. ಸ. ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ವಾಟೀ ಸವಾಲಿಗೆ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ವಾಟೀ ಸವಾಲುಃ ಮಾನ್ಯ ಸ.ಸ. ಅ ರವರಿಂದಃ**

ದಿನಾಂಕಃ 17.07.2018 ರಂದು ಮಧ್ಯಾಹ್ನ 12.30 ರಿಂದ 1.15 ರವರೆಗೆ ಚಾಸಾ.8 ರವರು ತಂದು ಹಾಜರುಪಡಿಸಿದ ಬಸ್ಸನ್ನು ನನ್ನ ಮತ್ತು ಚಾಸಾ.6 ರವರ ಸಮಕ್ಷಮ ಪೊಲೀಸರು

ಅಮಾನತುಪಡಿಸಿಕೊಂಡಿದ್ದರು ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ಸದರಿ ಸಮಯದಲ್ಲಿ ಕೆಎ-06-ಎಫ್-922 ರ ಬಸ್ಸನ್ನು ಅಮಾನತುಪಡಿಸಿಕೊಳ್ಳಲಾಯಿತು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪಂಚನಾಮೆ ಮಾಡಿ ನಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಪಂಚನಾಮೆ ಮಾಡಿದ್ದರೂ ಸಹ ಆರೋಪಿಗೆ ಅನೂಕೂಲ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃಆರೋಪಿ ಪರ ವಕೀಲರಿಂದಃ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.**

ಮರುವಿಚಾರಣೆ ಇಲ್ಲ.

**( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ.ಕೇ. ಸರಿ ಇದೆ .

ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ .ದಂ .
ಕುಣಿಗಲ್